# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2109 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 25.03.2026 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ತುಮಕೂರು ಜಿಲ್ಲೆಯಲ್ಲಿ ಸರ್ಕಾರದಿಂದ ಎಷ್ಟು ರೈತರಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಸರ್ಕಾರವು ಸ್ವಯಂ 1-5 ಕಡತ ತಯಾರಿಸುವ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿದ್ದು, ಇದರಂತೆ ತುಮಕೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಮಂಜೂರಾತಿ ಪಡೆದಿರಬಹುದಾದದ ರೈತರ ಸಂಖ್ಯೆ ಈ ಕೆಳಕಂಡಂತಿದೆ:-
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಭೂಮಿಯನ್ನು ಮಂಜೂರಾತಿ ಪಡೆದಿರುವ ರೈತರ ಸಂಖ್ಯೆ</th></tr>
<tr><td>1.</td><td>ತುಮಕೂರು</td><td>4258</td></tr>
<tr><td>2.</td><td>ಗುಬ್ಬಿ</td><td>9164</td></tr>
<tr><td>3.</td><td>ಕುಣಿಗಲ್</td><td>6811</td></tr>
<tr><td>4.</td><td>ಕೊರಟಗೆರೆ</td><td>3867</td></tr>
<tr><td>5.</td><td>ಮಧುಗಿರಿ</td><td>5079</td></tr>
<tr><td>6.</td><td>ಪಾವಗಡ</td><td>3293</td></tr>
<tr><td>7.</td><td>ಶಿರಾ</td><td>12186</td></tr>
<tr><td>8.</td><td>ತುರುವೇಕೆರೆ</td><td>7825</td></tr>
<tr><td>9.</td><td>ತಿಪಟೂರು</td><td>7622</td></tr>
<tr><td>10.</td><td>ಚಿಕ್ಕನಾಯಕನಹಳ್ಳಿ</td><td>7768</td></tr>
<tr><td colspan="2">ಒಟ್ಟು</td><td>67873</td></tr>
</table></td></tr>
</table>

| | | |
|---|---|---|
| ಆ) | ಎಷ್ಟು ಜನ ರೈತರಿಗೆ ಭೂಮಿಯನ್ನು ಪೋಡಿ ದುರಸ್ತಿ ಮಾಡಿಕೊಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) ಉಳಿದ ರೈತರ ಭೂಮಿಯನ್ನು ಯಾವ ಕಾಲಮಿತಿಯಲ್ಲಿ ದುರಸ್ತಿ ಮಾಡಿಕೊಡಲಾಗುವುದು; | ತುಮಕೂರು ಜಿಲ್ಲೆಯಲ್ಲಿ ಸರ್ಕಾರದಿಂದ ಮಂಜೂರು ಮಾಡಲಾಗದಂತೆ ಪೋಡಿ ದುರಸ್ತಿ ಪಡಿಸಿರುವ ತಾಲ್ಲೂಕುವಾರು ವಿವರವನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.<br><br>ಸರ್ಕಾರದ ನಡವಳಿ ಸಂಖ್ಯೆ :ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25.11.2024 ರನ್ವಯ ಈ ಹಿಂದೆ ಯಾವುದೇ ಭೂ ಮಂಜೂರಿ ಕಡತದಲ್ಲಿ ಪೋಡಿ ಕೆಲಸ ನಿರ್ವಹಿಸಲು ಅಗತ್ಯವಿದ್ದ ಕನಿಷ್ಠ 05 ದಾಖಲೆಗಳು ಇರಬೇಕೆಂಬ ಷರತ್ತನ್ನು ಮಾರ್ಪಡಿಸಿ, ಕೇವಲ 03 ಮಂಜೂರಿ ದಾಖಲೆಗಳಾದ (1)ಅಧಿಕೃತ ಜ್ಞಾಪನ ಅಥವಾ ದರಖಾಸ್ತು ವಹಿ ಅಥವಾ ಮಂಜೂರಿ ನಡವಳಿ ವಹಿ (2) ಸಾಗುವಳಿ ಚೀಟಿ ಅಥವಾ ಸಾಗುವಳಿ ಚೀಟಿ ವಿತರಣಾ ವಹಿ (3) ಚಾಲ್ತಿ ಸಾಲಿನ ಪಹಣಿ ಇವುಗಳು ಪೋಡಿ ಕೆಲಸ ನಿರ್ವಹಿಸಲು ಸಾಕಾಗುವುದು ಎಂಬ ಸೂಚನೆಯನ್ನು ನೀಡಲಾಗಿದೆ.<br><br>ಅದರಂತೆ ತಹಶೀಲ್ದಾರರು ಲಭ್ಯ ಕನಿಷ್ಠ ದಾಖಲೆಗಳನ್ನು ಪರಿಶೀಲಿಸಿ ಮಂಜೂರಿ ನೈಜತೆಯನ್ನು ಖಾತರಿಪಡಿಸಿಕೊಂಡು ಅನುಬಂಧ-1 ರಂತೆ ಅಧಿಕೃತ ಜ್ಞಾಪನವನ್ನು ಆನ್‌ಲೈನ್‌ನಲ್ಲಿ ಅಳತೆಗಾಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ಒದಗಿಸಿದ ನಂತರ 30 ದಿನಗಳಲ್ಲಿ ಅರ್ಹ ಪ್ರಕರಣಗಳಲ್ಲಿ ಅಳತೆ ಕೈಗೊಂಡು ಪೋಡಿ ದುರಸ್ತಿ ಪಡಿಸಲು ಸೂಚಿಸಲಾಗಿದ್ದು ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ತಾಲ್ಲೂಕು ಕಾರ್ಯಾಲಯದಲ್ಲಿ ಪೋಡಿ ದುರಸ್ಥಿಗೆ ಅಗತ್ಯವಿರುವ ದಾಖಲೆಗಳು ಲಭ್ಯವಿಲ್ಲದ ಕಾರಣ ಪೋಡಿ ಮಾಡದೆ ರೈತರಿಗೆ/ಭೂದಾಖಲೆಗಳು ಮಂಜೂರಿದಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ದಾಖಲೆಗಳು ಲಭ್ಯವಿಲ್ಲದ ಇರುವ ಸಂದರ್ಭಗಳಲ್ಲಿ ಪೋಡಿ ದುರಸ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು; | ಸರ್ಕಾರದ ಆದೇಶ ಸಂಖ್ಯೆ: ಕಂಇ 56 ಎಸ್ ಎಸ್ ಎಂ 2024 ದಿನಾಂಕ25-11-2024 ರಂತೆ ಕನಿಷ್ಠ 03 ದಾಖಲೆಗಳಿದ್ದಲ್ಲಿ ತಹಶೀಲ್ದಾರರು ಪೋಡಿಗಾಗಿ ಅನುಮೋದನೆ ನೀಡಿ ಅನುಬಂಧ-1 ನ್ನು ಹೊರಡಿಸಬಹುದಾಗಿರುತ್ತದೆ. ಕನಿಷ್ಠ 03 ದಾಖಲೆಗಳು ಇಲ್ಲದಿದ್ದಲ್ಲಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗ್ರೂಪಿಲೇ ಕಡತ ಪುನರ್ ನಿರ್ಮಾಣ ಸಮಿತಿಯಲ್ಲಿ ಮಂಡಿಸಿ, ಆರ್.ಡಿ 08 ಎಲ್ ಜಿ ಪಿ 2016 ದಿನಾಂಕ:20-06-2016 ರಂತೆ ಜಿಲ್ಲಾಧಿಕಾರಿಗಳು ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ |

| | | |
|---|---|---|
| ಈ) | ಪೋಡಿ ದುರಸ್ತಿಗೆ ಅಗತ್ಯವಿರುವ ಎಲ್ಲಾ ದಾಖಲೆಗಳು ರೈತರ ಬಳಿ ಇಲ್ಲದ ಕಾರಣ ರೈತರಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದ ಕಾರಣ ಕಂದಾಯ ಇಲಾಖೆಯವರ ಅಭಿಲೇಖಾಲಯದಿಂದ ದಾಖಲೆಗಳನ್ನು ಪಡೆದು ಪೋಡಿ ದುಸ್ತಿತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; | ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25.11.2024ರಲ್ಲಿ ನಮೂನೆ 01 ರಿಂದ 05 ಮತ್ತು 06 ರಿಂದ 10ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಲಾಗಿದೆ. ಅದರಂತೆ ರೈತರಿಂದ ಯಾವುದೇ ದಾಖಲೆಗಳನ್ನು ಪಡೆಯದೇ ಕಂದಾಯ ಇಲಾಖೆಯ ವತಿಯಿಂದ ಸ್ವಯಂ ಪ್ರೇರಿತವಾಗಿ ಅಭಿಲೇಖಾಲಯದಿಂದ ಪೋಡಿ ದುರಸ್ತಿಗೆ ಅಗತ್ಯವಿರುವ ಕನಿಷ್ಠ ಮಂಜೂರಿ ದಾಖಲೆಗಳನ್ನು ಪಡೆದು ನೈಜತೆಯನ್ನು ಪರಿಶೀಲಿಸಿಕೊಂಡು ತಂತ್ರಾಂಶದಲ್ಲಿ ನಮೂನೆ 01 ರಿಂದ 05ನ್ನು ಭರ್ತಿ ಮಾಡಿ ಅಳತೆಗಾಗಿ ಅನುಬಂಧ-1 ರಂತೆ ಅನಧಿಕೃತ ಜ್ಞಾಪನವನ್ನು ಆನ್ ಲೈನ್ ನಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ಕಛೇರಿಗೆ ರವಾನಿಸಿ, ಪೋಡಿ ದುರಸ್ತಿ ನಡೆಸಲಾಗುತ್ತಿದೆ. |
| ಉ) | ಭೂಮಾಪಕರ ಸಂಖ್ಯೆ ಕಡಿಮೆಯಿರುವ ಕಾರಣ ಸರ್ವೆ ಕಾರ್ಯ ಮಂದಗತಿಯಲ್ಲಿ ಸಾಗುತ್ತಿದ್ದು ಭೂಮಾಪಕರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? | ಭೂಮಾಪನ ಇಲಾಖೆಗೆ ಹೆಚ್ಚುವರಿಯಾಗಿ 1,000 ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ ಮತ್ತು 750 ಜನ ಸರ್ಕಾರಿ ಭೂ ಮಾಪಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ<br>ಭೂಮಾಪಕರ ಕೊರತೆಯಿರುವ ಕಡೆ ಪರವಾನಗಿ ಭೂಮಾಪಕರ ಸೇವೆಯನ್ನು ಬಳಸಿಕೊಳ್ಳಸಿಕೊಂಡು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಹಾಗೂ ತಂತ್ರಜ್ಞಾನ ಆಧಾರಿತ ಆಧುನಿಕ ರೋವರ್ ಉಪಕರಣಗಳನ್ನು ಬಳಸಿ, ಲಭ್ಯ ಸರ್ವೆಯರ್‌ಗಳಿಂದ ಹೆಚ್ಚಿನ ಜಮೀನುಗಳನ್ನು ಅಳತೆ ಮಾಡುವ ಉದ್ದೇಶದಿಂದ ಈಗಾಗಲೇ 590 ರೋವರ್‌ಗಳನ್ನು ಖರೀದಿಸಿ ಸರ್ವೆಗೆ ಬಳಸಲಾಗುತ್ತಿದೆ ಹಾಗೂ 625 ರೋವರ್‌ಗಳನ್ನು ಪೂರೈಸಲು ಕಾರ್ಯದೇಶ ನೀಡಿರುತ್ತದೆ ಈ ರೀತಿಯಾಗಿ ಅನುಬಂಧ-1ರಂತೆ ಅಧಿಕೃತ ಜ್ಞಾಪನ ಸ್ವೀಕೃತವಾದ 30 ದಿನಗಳ ಒಳಗಾಗಿ ಅಳತೆ ಕಾರ್ಯ ಪೂರೈಸಲು ಕ್ರಮಕೈಗೊಳ್ಳಲಾಗಿದೆ. |

(ಕಡತ ಸಂಖ್ಯೆ: ಆರ್‌ಡಿ 39 ಎಲ್‌ಜಿಟಿ 2026)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

| ಅನುಬಂಧ-01 | | | | | LCQ-216(2109) |
|---|---|---|---|---|---|
| **ತುಮಕೂರು ಜಿಲ್ಲೆಯಲ್ಲಿ ಮಂಜೂರಿ ಜಮೀನುಗಳ ಪೋಡಿ ದುರಸ್ತಿ ಪಡಿಸಿರುವ ತಾಲ್ಲೂಕುವಾರು ವಿವರ** | | | | | |
| ಕ್ರ | ತಾಲ್ಲೂಕು | ತಹಶೀಲ್ದಾರರಿಂದ ನಮೂನೆ 01 ರಿಂದ 05 ಭರ್ತಿ ಮಾಡಿರುವ ಸ.ನಂಗಳು | ಅನುಬಂಧ-1 ರಂತೆ ಅಳತೆಗೆ ನೀಡಿರುವ ಮಂಜೂರಿದಾರರ ಸಂಖ್ಯೆ | ಅಳತೆ ಕಾರ್ಯ ಪೂರ್ಣಗೊಳಿಸಿರುವ ಮಂಜೂರಿದಾರರ ಸಂಖ್ಯೆ | ದುರಸ್ತಿ ಕಾರ್ಯ ಪೂರ್ಣ ಗೊಳಿಸಿರುವ ಮಂಜೂರಿದಾರರ ಸಂಖ್ಯೆ |
| 1 | ತುಮಕೂರು | 952 | 675 | 364 | 49 |
| 2 | ಗುಬ್ಬಿ | 559 | 3743 | 2427 | 809 |
| 3 | ಕುಣಿಗಲ್ | 1073 | 1787 | 1279 | 529 |
| 4 | ತಿಪಟೂರು | 1569 | 3043 | 1259 | 720 |
| 5 | ತುರುವೆಕೆರೆ | 263 | 1841 | 1673 | 741 |
| 6 | ಚಿ .ನಾ ಹಳ್ಳಿ | 691 | 2705 | 1724 | 417 |
| 7 | ಮಧುಗಿರಿ | 722 | 605 | 601 | 273 |
| 8 | ಕೊರಟಗೆರೆ | 455 | 742 | 632 | 247 |
| 9 | ಶಿರಾ | 1420 | 4873 | 3165 | 1875 |
| 10 | ಪಾವಗಡ | 1144 | 1161 | 927 | 426 |
| | ಒಟ್ಟು | **8,848** | **21,175** | **14,051** | **6,086** |